# ವ್ಯಾನಿಟಿ ಬ್ಯಾಗ್ ಲೋಕದೊಳ್...

ಹೆಂಗಸರ ವ್ಯಾನಿಟಿ ಬ್ಯಾಗುಗಳ ಲೋಕ ಸ್ವತಃ ಅವರವರ ಗಂಡಂದಿರಿಗೂ ಅಪರಿಚಿತ. ಪರ್ಸನಲ್ ಡೈರಿಯಂತೆ ಅದು ಅತ್ಯಂತ ಖಾಸಗಿ. 'ವ್ಯಾನಿಟಿ ಬ್ಯಾಗಿನಲಿ ಕೈಹಾಕಿ ನೋಡುವುದು ಎಂದಿಗೂ ಉಚಿತವಲ್ಲ ಪುರುಷರೇ' ಎನ್ನುವುದು ವೈದೇಹಿಯವರ ಕಿವಿಮಾತು.




■ ಶ್ರೀರಂಜನಿ ಅಡಿಗ
ಕಲೆ: ಸಂತೋಷ್ ಸಸಿಹಿತ್ಲು

ಎರಡು, ಮೂರು ತಿಂಗಳಿಗೊಮ್ಮೆ ಬೀರುವಿನಲ್ಲಿ ತುಂಬಿಕೊಂಡಿರುವ ಹಳೇ ಸಾಮಾನುಗಳಿಗೆ ಮುಕ್ತಿಕೊಡುವಾಗ ಇಪ್ಪತ್ತು ವರ್ಷಗಳ ಹಿಂದೆ ಇಂಗ್ಲೆಂಡಿನಿಂದ ಅಣ್ಣ ತಂದಿದ್ದ ವ್ಯಾನಿಟಿ ಬ್ಯಾಗ್ ಕೈಗೆ ಸಿಕ್ಕಿಯೇ ಸಿಗುತ್ತದೆ. ಈಗ ಈ ವ್ಯಾನಿಟಿ ಬ್ಯಾಗು ಇಂಗ್ಲೆಂಡಿನವರಂತೆ ಬಿಳುಚಿಕೊಂಡಿದ್ದರೂ, ಅವರ ಚರ್ಮದಂತೆ ಝಿಪ್ಪು ನುಣುಪಾಗಿರದಿದ್ದರೂ, ಅದನ್ನೊಮ್ಮೆ ಹಿಂದೆಮುಂದೆ ಮಾಡಿ, ಅದರ ಮೈಮೇಲೆ ಕೈಯನ್ನು ನಯವಾಗಿ ಸವರಿ, ಹೆಗಲಿಗೇರಿಸಿ ಎರಡು ಹೆಜ್ಜೆ ಕ್ಯಾಟ್‌ವಾಕ್ ಮಾಡಿ ಒಳಗಿಟ್ಟರೇನೇ ಸಮಾಧಾನ. ಏಕೆಂದರೆ ಈಗ ನನ್ನ ಹತ್ತಿರ ಹಲ ಬಗೆಯ ವ್ಯಾನಿಟಿ ಇದೆಯಾದರೂ, ಅಣ್ಣ ತಂದದ್ದೆಂದು ವಿಶೇಷ ಸೆಂಟಿಮೆಂಟ್ ಈ ಬ್ಯಾಗಿನ ಮೇಲೆ. ಹೀಗೆ ಅವನು ಕೊಟ್ಟ ಜೀನ್ಸ್‌ಪ್ಯಾಂಟು, ಟೀಶರ್ಟು ಈಗ ಹಾಕಿಕೊಳ್ಳಲು ಆಗದಿದ್ದರೂ ಜೋಪಾನ ಮಾಡಿ ಇಟ್ಟಿದ್ದೇನೆ. ಇಂಥ ಹಳೆಯ ಸಾಮಾನುಗಳ ಸಂಗ್ರಹ ನೋಡಿ ನಮ್ಮ ಮನೆ 'ಮಿನಿ ಮಂಜೂಷಾ' ಎಂದು ತಮಾಷೆ ಮಾಡುತ್ತಿರುತ್ತಾರೆ ನನ್ನ ಸಂಗಾತಿ.

ಅದೆಷ್ಟೋ ಬ್ಯಾಗುಗಳು ಇದ್ದರೂ ಹೆಂಗಸರಿಗೆ ಸೀರೆಯಂತೆಯೇ ಬ್ಯಾಗುಗಳ ಮೇಲಿನ ಮೋಹ ಕಡಿಮೆಯಾಗುವುದಿದೆಯೇ? ಮೊದಲೆಲ್ಲಾ ಬ್ಯಾಗು ಹಿಡಿದುಕೊಂಡು ಹೋಗುವವರನ್ನು ಶ್ರೀಮಂತರೆಂದು ಅಥವಾ ಪ್ರೆಸ್ಟೀಜೆಂದು ಭಾವಿಸುತ್ತಿದ್ದರು. ಆದರೆ ಈಗದು ಕೈಯಲ್ಲಿ ಇರಲೇಬೇಕಾದ ಅಗತ್ಯಸೇವೆಗಳ (ಲಾಕ್‌ಡೌನ್ ಸಮಯ ನೆನಪಾಗುವುದಲ್ಲ!) ಲಿಸ್ಟಲ್ಲಿ ಸೇರಿದೆ.

ಏನೇ ಅಲಂಕಾರ ಮಾಡಿಕೊಂಡರೂ ವ್ಯಾನಿಟಿ ಬ್ಯಾಗು ಇಲ್ಲವೆಂದರೆ ಅದು ಅಪೂರ್ಣವೇ! ಇಂಗ್ಲೆಂಡಿನ ರಾಣಿ ಅರಮನೆಯಿಂದ ಅಡಿ ಹೊರಗಿಡುವಾಗ ಕೈಲ್ಲೊಂದು ಬ್ಯಾಗು, ಕೊಡೆ, ಹ್ಯಾಟು ಇರಲೇಬೇಕು. ಸೆಲೆಬ್ರಿಟಿ ನಟಿಯರ ಬ್ಯಾಗುಗಳನ್ನು ನ್ಯೂಸ್ ಚಾನೆಲ್ಲಿನವರು ದಿನವಿಡೀ ಹೈಲೈಟ್ ಮಾಡಿ ಟಿಆರ್‌ಪಿ ಏರಿಸಿಕೊಳ್ಳುತ್ತಾರೆ. ಪತ್ರಿಕೆಗಳೂ ಆ ಬ್ಯಾಗಿನ ಕುರಿತು ಬಾಕ್ಸ್ ನ್ಯೂಸ್ ಬರೆಯುತ್ತವೆ. ಐಪಿಎಲ್ ಹರಾಜಿನ ಸಮಯದಲ್ಲಿ ನೀತಾ ಅಂಬಾನಿಯ ಲಕ್ಷಗಟ್ಟಲೆ ರೂಪಾಯಿಯ ಬ್ಯಾಗು, ಹರಾಜಾದ ಆಟಗಾರರಿಗಿಂತ ಜಾಸ್ತಿ ಸುದ್ದಿಮಾಡುತ್ತದೆ. ಸರ್ಕಸ್ಸಿನಲ್ಲಿ ವ್ಯಾನಿಟಿ ಬ್ಯಾಗು ಹಿಡಿದ ಮಂಗ ಶೋಕಿ ಮಾಡುವುದು ಲಲನೆಯರಿಗಿಂತ ಯಾವುದರಲ್ಲಿಯೂ ಕಮ್ಮಿಯಿರುವುದಿಲ್ಲ!

ವ್ಯಾನಿಟಿ ಬ್ಯಾಗು ತೋರುವ ಬಹುರೂಪ ಒಂದೆರಡೇ? ಮೂರು –ನಾಲ್ಕು ವರ್ಷದ ಬಾಲೆಯಿಂದ ಆರಂಭವಾಗುವ ಬ್ಯಾಗುಗಳ ಹುಚ್ಚು ಆರ್ಥ್ರೈಟಿಸ್ ಆಗಿ ಕಾಲಿನ ಮೇಲೆ ಭಾರ ಹಾಕಲಾಗದಿದ್ದರೂ ಹೆಗಲಲ್ಲಿ ಮಾತ್ರ ಬ್ಯಾಗಿನ ಭಾರವಿದ್ದೇ ಇರುತ್ತದೆ. ಕಾಲೇಜಿನ ಹುಡುಗಿಯರಿಗೆ ಕ್ರೆಡಿಟ್ ಕಾರ್ಡು, ಐಡಿ ಕಾರ್ಡು, ದುಡ್ಡು, ಮೊಬೈಲು ಹಿಡಿಸುವ ಸಣ್ಣ ಬ್ಯಾಗುಗಳ ಜೊತೆಗೆ ಬಾಯ್ ಫ್ರೆಂಡಿನ ಜೊತೆ ಹೋಗಲು ಟ್ರೆಂಡಿಯಾದ ಕೆಲವು ಬ್ಯಾಗುಗಳಿರುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ ಮದುವೆಯಾಗಿ ಮಗುವಾದ ಮೇಲೆ ಬ್ಯಾಗುಗಳ ಸೈಝು ದೊಡ್ಡದಾಗುತ್ತಾ ಹೋಗುತ್ತದೆ. ಡೈಪರ್ರು, ನೀರು, ವೈಪ್ಸು, ಸಿರೆಲಾಕು, ಅಂಗಿ ಚಡ್ಡಿಗಳು ಎಂದು ಚೀಲ ಎಷ್ಟು ದೊಡ್ಡದಿದ್ದರೂ ಸಾಲದು. ಎಲ್ಲಿಗೆ ಹೋಗುವುದಿದ್ದರೂ, ದನದ ಹಿಂದೆ ಕರು ಇರುವಂತೆ ಆ ಬ್ಯಾಗು ಬರುತ್ತದೆ.

ಪಾರ್ಟಿ, ರಿಸೆಪ್ಶನ್‌ಗಳಿಗೆ ಮುತ್ತು–ಕಲ್ಲುಗಳಿಂದ ಅಲಂಕರಿಸಲಾದ ಕ್ಲಚ್ಚುಗಳು, ಪಿಕ್ನಿಕ್ ಹೋಗಲು ಸ್ಲಿಂಗ್ ಬ್ಯಾಗುಗಳು, ಕಾರ್ಪೊರೇಟ್ ಕಾರ್ಯಕ್ರಮಗಳಿಗೆ ಇವ್ಯಾವುದೂ ಹೊಂದಿಕೆಯಾಗದೆ ಬೇರೊಂದು ಬಗೆಯದೆಂದು ವಿಧವಿಧದ ಬ್ಯಾಗುಗಳಿರುತ್ತವೆ. ವಾಕಿಂಗಿಗೆ, ಮಾರ್ಕೆಟ್ಟಿಗೆ, ಮದುವೆಗೆಂದು ಬಗೆಬಗೆಯ